ರಾಜ್ಯದಲ್ಲಿ ಅನಕ್ಷರಸ್ಥರ ನಿವಾರಣೆ

142 (77) ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಶಿವಾಜಿನಗರ) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಅನಕ್ಷರಸ್ಥರ ಪ್ರಮಾಣವೆಷ್ಟು 2000ರಿಂದ 2003 ರ ವರೆಗಿನ ವರ್ಷವಾರು ಮಕ್ಕಳು ಹಾಗೂ ವಯಸ್ಕರ ಪ್ರತ್ಯೇಕ ವಿವರ ಒದಗಿಸುವುದು)

ಆ) ಮಕ್ಕಳ ಶಾಲಾ ಹಾಜರಾತಿಯನ್ನು ಹೆಚ್ಚು ಮಾಡಲು ಕೈಗೊಂಡ ಕ್ರಮಗಳೇನು.

ಇ) ಶಾಲೆಗೆ ಹೋಗದೇ ಇರುವ ಹಾಗೂ ಶಾಲೆಯನ್ನು ಬಿಟ್ಟಿರತಕ್ಕ ಮಕ್ಕಳ ಅಂದಾಜು ಸಂಖ್ಯೆ ಎಷ್ಟು

ಈ) ರಾಜ್ಯದಲ್ಲಿ ಬಡವರು ಮಕ್ಕಳನ್ನು ಶಾಲೆಗಳಿಂದ ಬಿಡಿಸಿ ಮನೆಗೆಕೆಲಸ ಹಾಗು ಇತರೆ ಕೆಲಸಗಳಿಗೆ ಕಳುಹಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ

ಉ) ಹಾಗಿದ್ದಲ್ಲಿ ಈ ಬಗ್ಗೆ ಕೈಗೊಳ್ಳಲಿರುವ ಕ್ರಮಗಳೇನು?

ಪ್ರೋ॥ ಬಿ ಕೆ ಚಂದ್ರಶೇಖರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು)

ಅ) 2001ರ ಜನಗಣತಿ ಪ್ರಕಾರ ರಾಜ್ಯದಲ್ಲಿ ಶೇಖಡ 32 96 ರಷ್ಟು ಅನಕ್ಷರಸ್ಥರಿರುತ್ತಾರೆ (ಅನುಬಂಧ ಲಗತ್ತಿಸಿದೆ) 15 35 ವರ್ಷ ವಯೋಮಿತಿಯ ಅನಕ್ಷರಸ್ಥರ ಅಂದಾಜು ಸಂಖ್ಯೆ 39 ಲಕ್ಷ ಇರುತ್ತದೆ

ಆ) ಸರ್ಕಾರದ ವತಿಯಿಂದ 6–14 ವಯಸ್ಸಿನ (1–8ನೇ ತರಗತಿ) ಮಕ್ಕಳ ಶಾಲಾ ಹಾಜರಾತಿಯನ್ನು ಉತ್ತಮ ಪಡಿಸಲು ಹಮ್ಮಿಕೊಂಡಿರುವ ಕಾರ್ಯಕ್ರಮಗಳು ಈ ಕೆಳಗಿನಂತಿವೆ

1 ರಿಂದ 7ನೇ ತರಗತಿಯ ಎಲ್ಲಾ ಮಕ್ಕಳಿಗೆ ಉಚಿತ ಪಠ್ಯಪುಸ್ತಕ ಹಗೂ ಸಮವಸ್ತ್ರ ನೀಡಲಾಗುತ್ತಿದೆ

"ಅಕ್ಷರ ದಾಸೋಹ" ಕಾರ್ಯಕ್ರಮದಡಿ ಸರ್ಕಾರಿ ಶಾಲೆಗಳಲ್ಲಿ 1–5ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಎಲ್ಲಾ ಮಕ್ಕಳಿಗೆ ಮಧ್ಯಾಹ್ನದ ಬಿಸಿಊಟ ನೀಡಲಾಗುತ್ತಿದೆ

ಪರಿಶಿಷ್ಟ ಜಾತಿ/ ಪರಿಶಿಷ್ಟ ವರ್ಗದ ಮಕ್ಕಳಿಗೆ ಉಚಿತ ನೋಟ್ ಪುಸ್ತಕ ಮತ್ತು ಶಾಲಾ ಬ್ಯಾಗುಗಳನ್ನು ನೀಡಲಾಗುತ್ತಿದೆ.

ಪರಿಶಿಷ್ಟ ಜಾತಿ/ಪರಿಶಿಷ್ಟಪಂಗಡ ವಿದ್ಯಾರ್ಥಿಗಳಿಗೆ ಹಾಗೂ ಹಿಂದುಳಿದ ವರ್ಗಗಳಿಗೆ ವಿದ್ಯಾರ್ಥಿವೇತನ ನೀಡಲಾಗುತ್ತಿದೆ

ಇ) ಫೆಬ್ರವರಿ 2003ರಲ್ಲಿದ್ದಂತೆ ರಾಜ್ಯದಲ್ಲಿ 6–14 ವಯಸ್ಸಿನ ಹಾಗೂ ಶಾಲೆಗೆ ದಾಖಲಾಗದಿರುವ ಮಕ್ಕಳ ಸಂಖ್ಯೆ 4 06 ಲಕ್ಷ

ಈ) ಹೌದು ಬಂದಿದೆ

ಉ) ಸರ್ವ ಶಿಕ್ಷಣ ಅಭಿಯಾನದಡಿ "ಚಿಣ್ಣರ ಅಂಗಳ", "ಬೀದಿಯಿಂದ ಶಾಲೆಗೆ," "ಬಾ ಮರಳಿ ಶಾಲೆಗೆ", "ಬಾ ಬಾಲೆ ಶಾಲೆಗೆ", "ಪರ್ಯಾಯ ಶಾಲೆಗಳು", "ಕೂಲಿಯಿಂದ ಶಾಲೆಗೆ", "ಸದಾ ಶಾಲೆ" (ಮಧ್ಯಂತರ ಶಾಲೆ–ವಿಶೇಷವಾಗಿ ದುಡಿಯುವ ಮಕ್ಕಳಿಗೆ) ಕಾರ್ಯಕ್ರಮಗಳು ಹಾಗೂ ಸಂಚಾರಿ ಶಾಲೆಗಳನ್ನು ಮುಂದುವರಿಸಲಾಗಿದೆ ಕಾರ್ಮಿಕ ಇಲಾಖೆ, ಪೋಲೀಸ್ ಇಲಾಖೆ ಸಮಾಜ ಕಲ್ಯಾಣ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರ ಸಹಕಾರದೊಂದಿಗೆ ಮಕ್ಕಳನ್ನು ಕೂಲಿಯಿಂದ ಬಿಡಿಸಿ ಶಾಲೆಗೆ ತರಲು ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುವುದು

ಅನುಬಂಧ - I

Particulars of Out of school children (District-wise)

Sl No	District	6-14 out of School	% of out of school
1	2	3	4
1	Bagalkote	22348	8 06
2	Bangalore North	3195	0 99
3	Bangalore Rural	5736	2 11
4	Bangalore South	4862	1 13
5	Belgaum	21596	6 74
6	Bellary	29635	8 84
7	Bidar	7801	2 96
8	Bijapur	33025	10 34
9	Chamarajanagar	4785	3 65
10	Chickballapur	8509	4 74
11	Chickmagalore	5277	3 30
12	Chikkodi	23031	6 02
13	Chitradurga	10387	4 35
14	Dakshina Kannada	4965	1 85
15	Davanagere	26722	9 31
16	Dharwad	13309	5 61
17	Gadag	8794	5 72
18	Gulbarga	28882	8 67
19	Hassan	3325	1 42
20	Haveri	17297	7 58
21	Kodagu	792	1 11
22	Kolar	5990	2 69
23	Koppal	20980	9 92
24	Madhugiri	6703	4 48
25	Mandya	3158	1 31
26	Mysore	7691	2 18
27	Raichur	20946	7 61

1	2	3	4
28	Shimoga	7125	2 86
29	Tumkur	4603	2 06
30	Udupi	1554	1 03
31	Uttara Kannada	15303	7 49
32	Yadgir	27249	13 75
	Total	405907	5 15

ಬೈಲಹೊಂಗಲ ತಾಲ್ಲೂಕಿನ ಸಂಗೊಳ್ಳಿ ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರದ ಆವರಣಗೂಡೆ ಹಾಗೂ ಸಿಬ್ಬಂದಿ ವಸತಿ ಗೃಹ ನಿರ್ಮಾಣ

143 (33) ಶ್ರೀ ಕೌಜಲಗಿ ಮಾಹಂತೇಶ್ ಶಿವಾನಂದ (ಬೈಲಹೊಂಗಲ) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಳಗಾವಿ ಜಿಲ್ಲೆ ಬೈಲಹೊಂಗಲ ತಾಲ್ಲೂಕಿನ ಸಂಗೊಳ್ಳಿ ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರದ ಸಿಬ್ಬಂದಿಗೆ ವಸತಿ ಗೃಹಗಳು ಇಲ್ಲದೆ ಇರುವುದರಿಂದ ತೊಂದರೆಯಾಗುತ್ತಿರುವುದು ನಿಜವೇ

ಆ) ಹಾಗಿದ್ದಲ್ಲಿ, ಕೂಡಲೇ ವಸತಿಗೃಹ ಕಟ್ಟಲು ಕ್ರಮ ಕೈಗೊಳ್ಳಲಾಗುವುದೇ

ಇ) ಈ ಪ್ರಾಥಮಿಕ ಆರೋಗ್ಯ ಕೇಂದ್ರದ ಸುತ್ತಲೂ ಕಾಂಪೌಂಡ್ ಗೋಡೆ ಇಲ್ಲದೆ ಇರುವುದರಿಂದ ಸರ್ಕಾರದ ಆಸ್ತಿಯು ಅತಿಕ್ರಮಣವಾಗುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ

ಈ) ಹಾಗಿದ್ದಲ್ಲಿ, ಆಸ್ತಿ ಕಾಪಾಡಲು ಆರೋಗ್ಯ ಕೇಂದ್ರದ ಸುತ್ತಲೂ ಆವರಣ ಗೋಡೆ ಕಟ್ಟಲು ಕೂಡಲೇ ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಹೌದು

ಆ) ಅನುದಾನದ ಲಭ್ಯತೆಯ ಮೇರೆಗೆ ಕ್ರಮ ಕೈಗೊಳ್ಳಲಾಗುವುದು

ಇ) ಹೌದು ಈ ಬಗ್ಗೆ ನಿಗವಹಿಸಲು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಲಾಗಿದೆ

ಈ) ಅನುದಾನದ ಲಭ್ಯತೆಯ ಮೇರೆಗೆ ಕ್ರಮ ಕೈಗೊಳ್ಳಲಾಗುವುದು

ಖಾಸಗಿಯವರಿಗೆ ಪ್ರಾಥಮಿಕ ಆರೋಗ್ಯ ಕೇಂದ್ರಗಳ ನಿರ್ವಹಣೆಯನ್ನು ವಹಿಸಿ ಕೊಡುವುದು

144 (34) ಶ್ರೀ ಕೌಜಲಗಿ ಮಾಹಂತೇಶ್ ಶಿವಾನಂದ (ಬೈಲಹೊಂಗಲ) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಸರ್ಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಖಾಸಗಿಯವರಿಗೆ ವಹಿಸಿಕೊಡುವ ಸಂಗತಿ ಸರ್ಕಾರದ ಮುಂದೆ ಇದೆಯೇ?